# ತತ್ತ್ವಸಮನ್ವಯ

ಸ್ವಾಮಿ ಜಗದಾತ್ಮಾನಂದ

**ಪರಂಪರಾನುಗತವಾಗಿ ಬಂದಿರುವ ವೇದಾಂತತತ್ತ್ವಗಳ ನಡುವಿನ ವಿರೋಧವನ್ನು ಪರಿಹರಿಸಲು ಸ್ವಾಮಿ ವಿವೇಕಾನಂದರು ತಮ್ಮದೇ ಆದ ರೀತಿಯಲ್ಲಿ ಪ್ರಯತ್ನಿಸಿದರು. ಆ ಪ್ರಯತ್ನದ ಪ್ರತಿಬಿಂಬವನ್ನು ಈ ಲೇಖನದಲ್ಲಿ ಕಾಣಬಹುದು. "ಬದುಕಲು ಕಲಿಯಿರಿ" ಎಂಬ ಗ್ರಂಥದಿಂದ ಪ್ರಸಿದ್ಧರಾಗಿರುವ ಸ್ವಾಮಿ ಜಗದಾತ್ಮಾನಂದಜಿಯವರು ಪೊನ್ನಂಪೇಟೆಯ ರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾಗಿರುವರು.**

## ಹಿನ್ನೆಲೆ

ಭಗವಾನ್ ಶ್ರೀರಾಮಕೃಷ್ಣರು ಜಗತ್ತಿನ ಇತಿಹಾಸದಲ್ಲಿ ಹಿಂದೆಂದೂ ಕಂಡಿರದ ತಮ್ಮ ಅದ್ಭುತವೆನಿಸುವ ತಪಸ್ಸಿನಿಂದ ದಿವ್ಯಾದ್ಭುತ ಆಧ್ಯಾತ್ಮಿಕ ಅನುಭವಗಳನ್ನು ಪಡೆದಿದ್ದರು. ಸತ್ಯಾನ್ವೇಷಣೆಯ ವಿವಿಧ ಪಥಗಳಲ್ಲಿ ನಡೆದು ವಿಭಿನ್ನ ತೆರನಾದ ಅನುಭೂತಿಯನ್ನು ಹೊಂದಿದ್ದರು. ಬೇರೆ ಬೇರೆ ಸಾಧನೆಗಳನ್ನು ಕೈಗೊಂಡು ಮುನ್ನಡೆದಾಗ ಅವರ ಅನುಭವಗಳು ಬೇರೆ ಬೇರೆಯಾಗಿದ್ದರೂ ಅವುಗಳೆಲ್ಲ ಸೂತ್ರದಲ್ಲಿ ಪೋಣಿಸಿರುವ ಮಣಿಗಳಂತೆ ಒಂದೇ ಪರಮಸತ್ಯದ ವಿಭಿನ್ನ ಮುಖಗಳಾಗಿದ್ದವು ಎಂಬುದನ್ನು ಅವರು ಅರಿತಿದ್ದರು. ಅವರ ಅನುಭವಗಳೆಲ್ಲ ಅಸಾಮಾನ್ಯ ಸತ್ಯದರ್ಶನಗಳಾಗಿದ್ದವು. ಅವುಗಳ ಪ್ರಾಮಾಣಿಕತೆಯನ್ನು ಪ್ರಶ್ನಿಸುವಂತಿಲ್ಲ. ಪರಮಸತ್ಯಕ್ಕೆ ವಿಭಿನ್ನ ಪಾರ್ಶ್ವಗಳಿವೆ, ಮಜಲುಗಳಿವೆ, ಮುಖಗಳಿವೆ ಎಂಬುದು ಅವರಿಗೆ ಸ್ಪಷ್ಟವಾಗಿ ಗೋಚರವಾಗಿತ್ತು. ಸಗುಣ ಸಾಕಾರ ಭಗವಂತನ ಆವಿರ್ಭಾವಗಳ ಪರಿಚಯ ಅವರಿಗಿದ್ದಂತೆ ನಿರ್ಗುಣ ನಿರ್ವಿಶೇಷ ಪರಬ್ರಹ್ಮತತ್ತ್ವದ ಅನುಭವವೂ ಇತ್ತು. ಸತ್ಯವು ಒಂದೇ, ಅದನ್ನು ಋಷಿಗಳು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ ಎನ್ನುವ ವೈದಿಕ ಋಷಿವಾಕ್ಯವನ್ನು ತಮ್ಮ ಸಾಧನೆಯ ಪ್ರಯೋಗ ಶಾಲೆಯಲ್ಲಿ ಪರೀಕ್ಷಿಸಿ, ಪರಿಶೀಲಿಸಿ ಅದರ ಸತ್ಯತೆಯನ್ನು ಪುನಃ ನಿರ್ಭೀತಿಯಿಂದ ಸಾರಿದವರು ಅವರು. ಜಗತ್ತಿನ ಒಳಿತಿಗಾಗಿ ಮಾತ್ರ ತಾವು ಕಂಡು ಹಿಡಿದ ಸತ್ಯಗಳನ್ನು ಆಸಕ್ತರಾದ ಸತ್ಯಾನ್ವೇಷಿಗಳಿಗೆ ಸರಳ ಭಾಷೆಯಲ್ಲಿ ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ಬೋಧಿಸಿದರು. ಭಿನ್ನ ಭಿನ್ನ ಭಗವದ್ಭಾವನೆಯಲ್ಲಿ ವಿಶ್ವಾಸವಿರಿಸಿದ, ಭಿನ್ನ ಭಿನ್ನ ಪೂಜಾ ವಿಧಾನಗಳನ್ನು ಅನುಸರಿಸುವ, ಭಿನ್ನ ಭಿನ್ನ ತಾತ್ತ್ವಿಕ ಚಿಂತನೆಯಿಂದ ಬೇರೆ ಬೇರೆ ಸಿದ್ಧಾಂತಗಳನ್ನು ನೆಚ್ಚಿದ ಧರ್ಮಾಭಿಮಾನಿಗಳೆನಿಸಿಕೊಂಡವರು ಪರಸ್ಪರ ಕಚ್ಚಾಟ, ದ್ವೇಷ, ಅಸೂಯೆ, ಹಿಂಸಾರತಿ—ಇವುಗಳಿಂದ ಪೀಡಿತರಾಗಿ ಧರ್ಮದ ನಿಜವಾದ ಉದ್ದೇಶವನ್ನೇ ಮರೆತು ನಿಂದನೀಯ ಗೊಂದಲಕ್ಕೆ ಕಾರಣವಾದಂಥ ಸನ್ನಿವೇಶದಲ್ಲಿ ಅವರು ಈ ಗೊಂದಲವನ್ನು ಪರಿಹರಿಸುವ ಮಾರ್ಗವನ್ನು ಸೂಚಿಸಿದರು—ತಮ್ಮ ದಿವ್ಯ ಅನುಭೂತಿಯ ಬಲದಿಂದ ಪರಮಪರಿ ಶುದ್ಧವಾದ ಜೀವನದಿಂದ ಮತ್ತು ಉಪದೇಶಗಳಿಂದ, ಶಿಷ್ಯರಿಗೆ ನೀಡಿದ ತರಬೇತಿಯಿಂದ.

> ಸತ್ಯವು ಏಕಮೇವಾದ್ವಿತೀಯವೆಂದು ಸಾರುವ ಅದ್ವೈತ ತತ್ತ್ವವೇ ಪರಮೋಚ್ಚವೆಂದು ಸ್ವಾಮಿ ವಿವೇಕಾನಂದರು ಘೋಷಿಸುವುದರ ಜೊತೆಗೆ, ದ್ವೈತ, ವಿಶಿಷ್ಟಾದ್ವೈತ, ಅದ್ವೈತಗಳು ಆಧ್ಯಾತ್ಮಿಕ ವಿಕಾಸದ ವಿವಿಧ ಹಂತಗಳು ಮತ್ತು ಅದ್ವೈತ ಸಿದ್ಧಿಯೇ ಈ ವಿಕಾಸದ ಆತ್ಯಂತಿಕ ಗುರಿ ಎಂಬ ಹೊಸ ಭಾವನೆಯನ್ನು ಹಿಂದೂ ಧರ್ಮಕ್ಕೆ ಅವರು ಸೇರಿಸಿದರು.
>
> *—ಸೋದರಿ ನಿವೇದಿತಾ*

ಭಗವಾನ್ ಶ್ರೀರಾಮಕೃಷ್ಣರ ಜೀವನ ಮತ್ತು ಉಪದೇಶಗಳ ಬೆಳಕಿನಲ್ಲಿ ಸ್ವಾಮಿ ವಿವೇಕಾನಂದರು ಬೋಧಿಸಿ ಕಟ್ಟಿದ ನೂತನ ವೇದಾಂತ ತತ್ತ್ವದ ಸೌಧವನ್ನೂ ಅದರ ಕಾರ್ಯಪ್ರಣಾಲಿಯನ್ನೂ ಸಂಕ್ಷಿಪ್ತವಾಗಿ ಚಿಂತಿಸಲು ಈ ಲೇಖನದಲ್ಲಿ ಯತ್ನಿಸಲಾಗಿದೆ. ವೇದಾಂತದ ಈ ನೂತನ ವ್ಯಾಖ್ಯೆಯ ರೂಪರೇಖೆಗಳನ್ನು ನೀಡಿದವರು ಶ್ರೀರಾಮಕೃಷ್ಣರೇ. ಅದನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ ವಿವರಿಸಿ ಒಂದು ತತ್ತ್ವಸಿದ್ಧಾಂತವನ್ನಾಗಿ ಬೆಳೆಸಿದವರು ಸ್ವಾಮಿ ವಿವೇಕಾನಂದರು. ಸ್ವಾಮೀಜಿ ತಮ್ಮ ಅನುಭೂತಿ ಹಾಗೂ ಮಹೋಜ್ವಲ ಪ್ರತಿಭೆಯಿಂದ ಮಾಡಿದ ಗಭೀರ ಚಿಂತನೆಯಿಂದ ಎಂಥ ಭಾಷ್ಯವನ್ನು ರಚಿಸಿದರೆಂದರೆ ಅದು ಶಾಂಕರವೇದಾಂತದ ಸೂತ್ರಭಾಷ್ಯದಂತೆ ಉನ್ನತಮಟ್ಟದ ಸಮನ್ವಯ ಸಿದ್ಧಾಂತವಾಗಿ ಕಂಗೊಳಿಸುತ್ತದೆ.

## ತತ್ತ್ವವೈಷಮ್ಯ

ವೇದಾಂತದಲ್ಲಿ "ಅದ್ವೈತ" ಎಂದಾಗ ಅದನ್ನು ಎರಡು ವಿಧವಾಗಿ ಅರ್ಥೈಸಿಕೊಂಡರೆ ಎಷ್ಟೋ ಗೊಂದಲ ಕಡಮೆಯಾಗುವುದು. ಒಂದು : ಅದ್ವಿತೀಯವಾದ ಪರಮಸತ್ಯದ ಅನುಭೂತಿ ಅಥವಾ ಸಾಕ್ಷಾತ್ಕಾರ ಎಂಬ ಅರ್ಥದಲ್ಲಿ ; ಇನ್ನೊಂದು ಶಂಕರಾಚಾರ್ಯರಿಂದ ಪ್ರಣೀತವಾದ ತತ್ತ್ವಚಿಂತನಾ ವಿಧಾನ ಮತ್ತು ಸಿದ್ಧಾಂತ. ಅದ್ವೈತಾನುಭೂತಿ ಉಪನಿಷತ್ತಿನ ಋಷಿಗಳಿಗೆ ಧ್ಯಾನದ

ಚರಮಸ್ಥಿತಿಯಲ್ಲಿ ಗೋಚರವಾದ ಪರಮಸತ್ಯ. ಆದರೆ ಅದನ್ನು ಸಿದ್ಧಾಂತವಾಗಿ ತರ್ಕಯುಕ್ತಿಗಳಿಂದ ಸ್ಥಾಪಿಸುವಂಥ ಕಾರ್ಯ ಆಚಾರ್ಯ ಶಂಕರರಿಂದ ನಡೆಯಿತು. ಬ್ರಹ್ಮಾತ್ಮೈಕ್ಯ ಅನುಭೂತಿಯೇ ಕೊನೆಯ ಸತ್ಯವೆಂದು ಉಪನಿಷತ್ತಿನ ಉಕ್ತಿಗಳೂ ಮಹಾವಾಕ್ಯಗಳೂ ಸಾರುತ್ತವೆ. ಶ್ರುತಿಗಳು ಸಾರುವ ಮಹಾವಾಕ್ಯಗಳು ಉದ್ಘೋಷಿಸುವ ಈ ಚರಮ ಸತ್ಯವನ್ನು ಸಾರಾಸಗಟಾಗಿ ಅಲ್ಲಗಳೆಯುವ ಪ್ರಯತ್ನವನ್ನು ಮಾಡಿದ್ದು ದ್ವೈತ ಹಾಗೂ ವಿಶಿಷ್ಟಾದ್ವೈತಿಗಳ ಒಂದು ತಪ್ಪು. ಅದ್ವೈತಪರವಾದ ವಾಕ್ಯಗಳನ್ನು ದ್ವೈತಿಗಳೂ ವಿಶಿಷ್ಟಾದ್ವೈತಿಗಳೂ ಗಮನಿಸಲಿಲ್ಲ ಅಥವಾ ತಮ್ಮ ಸಿದ್ಧಾಂತಕ್ಕೆ ಅನುಕೂಲವಾಗುವಂತೆ ವ್ಯಾಖ್ಯಾನ ಮಾಡಿದರು. ಅದ್ವೈತಿಗಳೂ ಕೂಡ ದ್ವೈತವನ್ನೂ ವಿಶಿಷ್ಟಾದ್ವೈತವನ್ನೂ ಸಾರುವ ಉಪನಿಷತ್ತಿನ ವಾಕ್ಯಗಳನ್ನು ತಮ್ಮ ಸಿದ್ಧಾಂತಕ್ಕೆ ಅನುಕೂಲವಾಗುವಂತೆ ವ್ಯಾಖ್ಯಾನ ಮಾಡಿದರು, ಅಥವಾ ಅದಕ್ಕೆ ಸಲ್ಲಬೇಕಾದ ಪ್ರಾಮುಖ್ಯವನ್ನು ನೀಡಲಿಲ್ಲ. ಮೂವರು ಆಚಾರ್ಯರೂ ಅವರವರ ವೈಯಕ್ತಿಕ ದಿವ್ಯಾನುಭೂತಿ ಹಾಗೂ ವಿಶೇಷ ಮೇಧಾ ಶಕ್ತಿಯ ಬಲದಿಂದ ತಾವು ಕಂಡುಕೊಂಡ ಸತ್ಯವನ್ನೇ ಚರಮ ಸಿದ್ಧಾಂತವೆಂದು ಭಾಷ್ಯಗಳಲ್ಲಿ ಸಾರಿದರು. ತರ್ಕಯುಕ್ತಿಗಳಿಂದ ಅದನ್ನು ಸ್ಥಾಪಿಸುವ ಕಾರ್ಯ ಯಶಸ್ವಿಯಾಗಲಿಲ್ಲ. ತರ್ಕವಿತರ್ಕಗಳು ನಡೆಯುತ್ತಲೇ ಇವೆ. ಮುಂದೆಯೂ ನಡೆಯುವವು.

ವಿಭಿನ್ನ ಆಧ್ಯಾತ್ಮಿಕ ಅನುಭೂತಿಗಳ ಹಿನ್ನೆಲೆಯಿಂದ ವೇದಾಂತದ ವಿಭಿನ್ನ ಸಂಪ್ರದಾಯಗಳಲ್ಲಿ ಸಮನ್ವಯ ಸಾಮರಸ್ಯವನ್ನು ಹೇಗೆ ಉಂಟುಮಾಡಬಹುದೆಂಬುದನ್ನು ಶ್ರೀರಾಮಕೃಷ್ಣರೂ ಅವರ ನೆಚ್ಚಿನ ಶಿಷ್ಯರಾದ ಸ್ವಾಮಿ ವಿವೇಕಾನಂದರೂ ಈ ಯುಗದಲ್ಲಿ ಮಾರ್ಗದರ್ಶನ ಮಾಡಿದ್ದಾರೆ. ಹೆಚ್ಚಿನ ಜನ ಅದನ್ನು ಸಾಕಷ್ಟು ಗಮನಿಸಿದಂತಿಲ್ಲ.

## ಶಾಂಕರ ಅದ್ವೈತ

ಅದ್ವೈತ ವೇದಾಂತದ ಪ್ರಕಾರ ಪರಮಾರ್ಥಸತ್ಯ ಬ್ರಹ್ಮಮಾತ್ರ. ಕಾಣುವ ಜಗತ್ತು ಮಾಯೆಯಿಂದ ತೋರಿಕೊಳ್ಳುತ್ತಿದೆ. ನಮ್ಮ ನೈಜಸ್ವಭಾವದ ತಿಳಿವಳಿಕೆಯ ಅಭಾವದಿಂದ ಎಂದರೆ ಅಜ್ಞಾನದಿಂದ ನಾಮರೂಪಾತ್ಮಕವಾದ ಈ ಜಗತ್ತನ್ನು ಕಾಣುತ್ತೇವೆ, ಅನುಭವಿಸುತ್ತೇವೆ. ಈ ಅಜ್ಞಾನವು ಪರಬ್ರಹ್ಮವಸ್ತುವಿನ ನೈಜರೂಪವನ್ನು ಮರೆಮಾಡುವ ಆವರಣವೂ ಹೌದು ವಿಭಿನ್ನ ನಾಮರೂಪಗಳಾಗಿ ವಿಂಗಡವಾಗುವ ವಿಕ್ಷೇಪ ಶಕ್ತಿಯೂ ಹೌದು. ಮೊಲದ ಕೊಂಬಿನಂತೆ ಅದು ಏನೂ ಅಲ್ಲ ಎನ್ನುವಂತಿಲ್ಲ, "ಭಾವರೂಪ" ಎಂಬ ಶಬ್ದದಿಂದ ಅದರ ಅಸ್ತಿತ್ವವನ್ನು ಸೂಚಿಸಿದ್ದಾರೆ. ತನ್ನ ನೈಜಸ್ವರೂಪದ ಅಭಾವವೇ ಜೀವಾತ್ಮನ ಬಂಧನಕ್ಕೆ ಕಾರಣ ಎಂದರೆ ಸಕಲ ದುಃಖ, ಮೋಹಗಳಿಗೆ ಕಾರಣ. ಮೋಕ್ಷವೆಂದರೆ ಎಲ್ಲ ಬಂಧನಗಳಿಂದ ಬಿಡುಗಡೆ, ಸಕಲ ಮೋಹ ನಿವೃತ್ತಿ ಮತ್ತು ಶಾಶ್ವತ ಆನಂದಪ್ರಾಪ್ತಿ. ಅದು ಬ್ರಹ್ಮಾತ್ಮೈಕ್ಯ ಅನುಭೂತಿಯಿಂದಲೇ ಸಾಧ್ಯ. **ಈ ಅನುಭೂತಿಯಿಂದ ನಿಜವಾದ ಜ್ಞಾನವನ್ನು ಪಡೆಯುವುದೇ ಜೀವಿತದ ಶ್ರೇಷ್ಠ ಗುರಿ.**

ಪರಬ್ರಹ್ಮ ತತ್ತ್ವವನ್ನು ಕುರಿತು ಶಂಕರಾಚಾರ್ಯರು ನೀಡಿದ ವಿವರಣೆಯನ್ನೇ ಸ್ವಾಮಿ ವಿವೇಕಾನಂದರೂ ಪ್ರತಿಧ್ವನಿಸಿದ್ದಾರೆ, ವ್ಯತ್ಯಾಸವೇನೂ ಇಲ್ಲ ಎಂದು ತೋರುವುದು ಸಹಜ. ಆದರೆ ಇದು ಸ್ವಾಮಿ ವಿವೇಕಾನಂದರ ವಿಚಾರಧಾರೆಯ ಪೂರ್ಣ ಪರಿಚಯದಿಂದ ಉದಿಸಿದ ಅಭಿಪ್ರಾಯ ಎನ್ನಲಾಗದು.



ದೇವರೇ ಎಲ್ಲ ಧರ್ಮಗಳ ಕೇಂದ್ರವಾದರೆ,
ಪ್ರತಿಯೊಬ್ಬರೂ ಒಂದೊಂದು ತ್ರಿಜ್ಯದ ಮೂಲಕ
ಅವನ ಕಡೆಗೆ ಹೋಗುತ್ತಿದ್ದರೆ, ನಾವುಗಳೆಲ್ಲ
ಕೇಂದ್ರವನ್ನು ಸೇರುವುದರಲ್ಲಿ ಸಂಶಯವಿಲ್ಲ.

*– ಸ್ವಾಮಿ ವಿವೇಕಾನಂದ*

## ವಿವೇಕಾನಂದರ ಅದ್ವೈತ

ಸ್ವಾಮಿ ವಿವೇಕಾನಂದರು ಬೋಧಿಸಿದ ಅದ್ವೈತವು ವಿಶಿಷ್ಟಾದ್ವೈತ ಮತ್ತು ದ್ವೈತ ಸಿದ್ಧಾಂತಗಳ ಜೊತೆಗೆ ಸ್ನೇಹದಿಂದ ಇರುತ್ತದೆ. ಅವುಗಳನ್ನು ಖಂಡಿಸಿ ವಿರೋಧಿಸಲು ಹೋಗುವುದಿಲ್ಲ. ಇದನ್ನು ಔಪಚಾರಿಕವಾಗಿಯಾಗಲೀ ಹಿರಿಯಣ್ಣನ ಸಾಂತ್ವನ ನೀಡುವ ಮನೋಭಾವದಿಂದಾಗಲೀ ಹೇಳುತ್ತಿಲ್ಲ. ಅವುಗಳೆಲ್ಲ ಸತ್ಯಪಥಗಳು, ಒಂದೇ ಸತ್ಯದ ವಿಭಿನ್ನ ಆವಿರ್ಭಾವಗಳು. ಅವುಗಳೆಲ್ಲ ಅದ್ವೈತವು ಕರೆದೊಯ್ಯುವ ಗುರಿಯೆಡೆಗೇ ನಮ್ಮನ್ನು ಕರೆದೊಯ್ಯುವುವು ಎಂಬುದು ಅವರ ದೃಢವಿಶ್ವಾಸವಾಗಿತ್ತು. ಅವರೆನ್ನುತ್ತಾರೆ : "ಕೆಲವೊಮ್ಮೆ ನಮ್ಮಲ್ಲಿ ಪರಸ್ಪರ ವಿರೋಧಗಳೆನಿಸುವ ಭಾವಗಳಿರಬಹುದು. ಆದರೆ ಅವುಗಳೆಲ್ಲ ಒಂದೇ ವಿಶ್ವಸತ್ಯಕ್ಕೇ ಸೇರಿದವುಗಳು. ಆಕಾಶದೆತ್ತರಕ್ಕೆ ಏರಿ ಸೂರ್ಯನತ್ತ ಪಯಣಿಸುವ ವ್ಯಕ್ತಿಯೊಬ್ಬ ಮುನ್ನಡೆಯುವಾಗ ಬೇರೆ ಬೇರೆ ಸ್ತರಗಳಿಂದ ಸೂರ್ಯನ ಫೋಟೊ ತೆಗೆಯಬಹುದು. ಹಾಗೆ ತೆಗೆದ ಎರಡು ಫೋಟೋಗಳು ಸಮನಾಗಿರಲು ಸಾಧ್ಯವಿಲ್ಲ. ಆದರೆ ಅವು ಸೂರ್ಯನ ಫೋಟೋಗಳೇ

ಅಲ್ಲ ಎನ್ನುವಂತಿಲ್ಲ. ಅವುಗಳೆಲ್ಲ ಸರಿಯಾದ ಭಾವಚಿತ್ರಗಳೇ. ಅಂತೆಯೇ ದ್ವೈತಾದ್ವೈತವಿಶಿಷ್ಟಾದ್ವೈತಗಳು ಹಾಗೂ ಇತರ ತಾತ್ವಿಕ ಧಾರ್ಮಿಕ ಚಿಂತಾವಿಧಾನಗಳು ಸತ್ಯವನ್ನು ಬೇರೆ ಬೇರೆ ಅನುಭವ ಪ್ರೇರಿತ ದೃಷ್ಟಿಕೋನಗಳಿಂದ ವಿವರಿಸುವ ಪ್ರಯತ್ನ ಮಾತ್ರ. ಸತ್ಯಾನ್ವೇಷಣೆಯ ತೀವ್ರ ಹಂಬಲದ ವ್ಯಕ್ತಿಗಳ ಅನುಭವಗಳ ವಿವರಣೆಗಳು ಅವು." ಸ್ವಾಮೀಜಿ ಇನ್ನೂ ಒಂದು ಮಾತನ್ನು ಹೇಳುತ್ತಾರೆ. ಜಗತ್ತಿನಲ್ಲಿ ವಿಕಾಸದ ವಿಭಿನ್ನಹಂತಗಳಲ್ಲಿರುವವರೂ ವೈಶಿಷ್ಟ್ಯಪೂರ್ಣವ್ಯಕ್ತಿತ್ವಗಳುಳ್ಳವರೂ ಇದ್ದಾರೆ. ಮನುಷ್ಯರಲ್ಲಿ ಕಂಡುಬರುವ ಅಭಿರುಚಿ ಸಂಸ್ಕಾರ ಸಾಮರ್ಥ್ಯಗಳಲ್ಲಿ ವೈವಿಧ್ಯಗಳಿವೆ. ಅವರವರಿಗೆ ತಕ್ಕಂಥ ಎಂದರೆ ಅವರವರ ಆವಶ್ಯಕತೆಗಳಿಗೆ ತಕ್ಕಂಥ ತತ್ತ್ವ ಚಿಂತನಾ ವಿಧಾನಗಳೂ ಅನುಷ್ಠಾನವೈವಿಧ್ಯಗಳೂ ಇರುವುದು ಸಹಜ.

## ಅನುಭವ ವೈವಿಧ್ಯ

ಒಂದೇ ತತ್ತ್ವವನ್ನು ಬೇರೆ ಬೇರೆ ನೆಲೆಗಳಿಂದ, ಬೇರೆ ಬೇರೆ ದೃಷ್ಟಿಕೋನಗಳಿಂದ, ಅನುಭವಗಳಿಂದ ಅರಿಯಬಹುದೆಂಬ ಹಿನ್ನೆಲೆಯಿಂದ ದ್ವೈತಾದ್ವೈತವಿಶಿಷ್ಟಾದ್ವೈತಗಳಲ್ಲಿ ಸಮನ್ವಯವನ್ನು ಸಾಧಿಸಬಹುದೆಂಬುದು ಸ್ವಾಮೀಜಿಯವರ ಅಭಿಪ್ರಾಯವಾಗಿತ್ತು. ದೂರದಿಂದ ನೋಡಿದಾಗ ಸಮುದ್ರದ ನೀರಿನ ಬಣ್ಣ ನೀಲಿ ಎಂದೇ ತೋರುತ್ತದೆ. ಅದನ್ನು ಕೈಯಲ್ಲಿ ತೆಗೆದುಕೊಂಡು ಪರಿಶೀಲಿಸಿದಾಗ ಅದರಲ್ಲಿ ಯಾವ ಬಣ್ಣವೂ ಗೋಚರಿಸದು. ನಮಗೆ ಪೂರ್ಣದೃಷ್ಟಿ ಬೇಕಾದರೆ ಬೇರೆ ಬೇರ ಅನುಭವಗಳನ್ನು ಗಮನಿಸಿ ಅವುಗಳಲ್ಲಿ ಸಮನ್ವಯವನ್ನು ಸಾಧಿಸಬೇಕು.

ಕೆಲವೊಮ್ಮೆ ಬೇರೆ ಬೇರೆ ಅನುಭವಗಳು ಪರಸ್ಪರ ವಿರೋಧವೆಂದೇ ತೋರಬಹುದು. ಆದರೆ ಅವುಗಳನ್ನು ಅಲ್ಲಗಳೆಯಲಾರೆವು, ತಿರಸ್ಕರಿಸಲಾರೆವು. ಏಕೆಂದರೆ ಅವೂ ಯಥಾರ್ಥ ಅನುಭವಗಳೇ. ಅದ್ವೈತಿಯ ಬ್ರಹ್ಮಾನುಭೂತಿಯು ನಿರ್ವಿಕಲ್ಪ ಸಮಾಧಿಯನ್ನು ಆಧರಿಸಿದೆ. ಅಲ್ಲಿ ಪರಿಶುದ್ಧ ಪ್ರಜ್ಞೆಯ ಅನುಭೂತಿ ಮಾತ್ರವಿದೆ. ಎಲ್ಲ ದೃಶ್ಯದೃಕ್‌ಗಳ ವಿಲಯನದ ಅನುಭವ ಅದು. ನಿರ್ವಿಕಲ್ಪ ಸಮಾಧಿಯ ಅನುಭೂತಿಯ ಬಲದಿಂದ ಪರಮಸತ್ಯವನ್ನು ನಿರ್ಗುಣ ನಿರಾಕಾರ ಎನ್ನುತ್ತೇವೆ. ಸಚ್ಚಿದಾನಂದ ಸ್ವರೂಪವೆಂದೇ ಅದನ್ನು ನಿರ್ದೇಶಿಸಲಾಗುತ್ತದೆ. ದ್ವೈತವಾದಿಯ ದೃಷ್ಟಿಕೋನ ಸವಿಕಲ್ಪ ಸಮಾಧಿಯ ಅನುಭವವನ್ನು ಆಧರಿಸಿ ನಿಂತಿದೆ. ಧ್ಯಾನಶೀಲನಾದ ವ್ಯಕ್ತಿಯ ಪ್ರಜ್ಞೆಯು ಧ್ಯಾನಿಸುವವನಿಗಿಂತ ಬೇರೆಯಾದ ಧ್ಯೇಯವಸ್ತುವನ್ನು ಗ್ರಹಿಸುತ್ತದೆ. ಧ್ಯೇಯವಸ್ತುವಿಗೂ ಧ್ಯಾನಿಗೂ ಸಂಬಂಧ ಇದ್ದೇ ಇರುತ್ತದೆ—ಸವಿಕಲ್ಪ ಜ್ಞಾನದಲ್ಲಿ. ಈ ಸವಿಕಲ್ಪ ಜ್ಞಾನದ ಆಧಾರದ ಮೇಲೆ ಬ್ರಹ್ಮತತ್ತ್ವವನ್ನು ವಿಷಯಿ ಎಂದು ತೆಗೆದುಕೊಂಡರೆ ಜಗತ್ತು ಸತ್ಯವಾದ ವಿಷಯವಾಗಿಯೇ ಅದರೊಂದಿಗೆ ಸಂಬಂಧವನ್ನು ಹೊಂದಿ ನಿಲ್ಲುತ್ತದೆ. ಈ ವಿಷಯಿಯಾದ ಪರತತ್ತ್ವ ಅಥವಾ ಪರಮಾತ್ಮ ನಾವು ಕಾಣುವ ಈ ಜಗದ ಸೃಷ್ಟಿಸ್ಥಿತಿಲಯಕಾರಿಯಾದ ಸಗುಣನಿರಾಕಾರನಾಗಿಯೋ ಸಗುಣ ಸಾಕಾರನಾಗಿಯೋ ಪರಿಗಣಿತನಾಗುತ್ತಾನೆ. ಈ ಎರಡೂ ದೃಷ್ಟಿಕೋನಗಳು ಪರತತ್ತ್ವವನ್ನು ಕುರಿತ ನೈಜ ಅನುಭೂತಿಯನ್ನು ಆಧರಿಸಿ ನಿಂತಿರುವುದರಿಂದ ಅವುಗಳನ್ನು ನಿಜವೆಂದೇ ಸ್ವೀಕರಿಸಬೇಕಲ್ಲವೇ?

ಈ ಎರಡೂ ದೃಷ್ಟಿಕೋನಗಳಲ್ಲಿ ದೃಢವಿಶ್ವಾಸವಿರಿಸಿದ ಬೋಧಕರು ಜನರ ಅಭಿರುಚಿ ಸಂಸ್ಕಾರ ಸಾಮರ್ಥ್ಯ ಹಾಗೂ ಆವಶ್ಯಕತೆಗಳನ್ನು ಅನುಸರಿಸಿ ಸಂದರ್ಭಾನುಸಾರ ಒಮ್ಮೆ ನಿರ್ಗುಣ ನಿರಾಕಾರ ದೃಷ್ಟಿಕೋನದಿಂದಲೂ ಇನ್ನೊಮ್ಮೆ ಸಗುಣ ಸಾಕಾರ ದೃಷ್ಟಿಕೋನದಿಂದಲೂ ಮಾರ್ಗದರ್ಶನ ಮಾಡಬಹುದು. ಒಮ್ಮೆ ಅದ್ವೈತದ ಭಾಷೆಯಲ್ಲಿ ಬೋಧಿಸಬಹುದು. ಇನ್ನೊಮ್ಮೆ ದ್ವೈತದ ಪ್ರಕ್ರಿಯೆಗಳನ್ನು ತಮ್ಮ ಬೋಧನೆಯಲ್ಲಿ ಬಳಸಬಹುದು. ಇದನ್ನು ಕಂಡು ತರ್ಕಕರ್ಕಶರು ಇದೆಂಥ ಪರಸ್ಪರ ವಿರೋಧಾಭಾಸ ಎನ್ನುವ ಸಂಭವವಿಲ್ಲದೇ ಇಲ್ಲ. ಸ್ವಾಮಿ ವಿವೇಕಾನಂದರ ಬೋಧನೆಗಳಲ್ಲೂ ಇಂಥ ವೈರುಧ್ಯಗಳಿವೆ ಎಂದು ತೋರಿದರೂ ಆಧ್ಯಾತ್ಮಿಕ ಅನುಭವಗಳ ಸಮನ್ವಯದ ಹಿನ್ನೆಲೆಯಿಂದ ಇದನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು.

## ಈ ಸಮನ್ವಯ ತರ್ಕವನ್ನು ಮೀರಿದುದು

ಈ ಸಮನ್ವಯ ದೃಷ್ಟಿಯಿಂದ ಕೇವಲ ಸೈದ್ಧಾಂತಿಕ ತರ್ಕ ವಿತರ್ಕಗಳಲ್ಲಿ ನಾವು ಸಿಲುಕಿಕೊಳ್ಳದೇ, ನಮ್ಮ ನಮ್ಮ ಸಾಧನೆಯ ಪಥದಲ್ಲಿ ಮುನ್ನಡೆದು ದಿವ್ಯಾನುಭೂತಿಯನ್ನು ಹೊಂದಿ ಜೀವನ ಸಾರ್ಥಕ ಮಾಡಿಕೊಳ್ಳಬಹುದು. ನಮ್ಮಲ್ಲಿ ಶಾಂಕರ, ರಾಮಾನುಜ ಮಾಧ್ವ—ಈ ಮೂರು ಸಂಪ್ರದಾಯಗಳೂ ದಿವ್ಯ ಅನುಭೂತಿ ಸಂಪನ್ನರೂ ಪರಮಾದ್ಭುತ ಚಾರಿತ್ರ್ಯಸಂಪನ್ನರೂ ಆದ ಮಹಾಪುರುಷರನ್ನು ನೀಡಿವೆ. ತರ್ಕದ ವಿಧಾನಕ್ಕೆ ಸಂಪೂರ್ಣವಾಗಿ ನಿಲುಕದ ವಿಭಿನ್ನ ಆಧ್ಯಾತ್ಮಿಕ ಅನುಭವಗಳ ವೈವಿಧ್ಯದ ಹಿನ್ನೆಲೆಯಿಂದ ಸಮನ್ವಯದೃಷ್ಟಿ ಸಾಧ್ಯವಾಗುವುದು. ಇದರಿಂದ ಮತಪಂಥಗಳ ಹೆಸರಲ್ಲಿ ದ್ವೇಷ, ಅಸೂಯೆ, ಸಂಕುಚಿತತೆ, ಮತಾಂಧತೆ ದೂರವಾಗಲು ಸಾಧ್ಯ. ಎಲ್ಲ ಧರ್ಮಸಂಸ್ಥಾಪಕರೂ ಪ್ರವಾದಿಗಳೂ ಸಿದ್ಧಪುರುಷರೂ ಏಕಮೇವಾದ್ವಿತೀಯನಾದ ಒಬ್ಬ ಪರಮಾತ್ಮನಿಂದಲೇ ಸ್ಫೂರ್ತಿಯನ್ನೂ ಶಕ್ತಿಯನ್ನೂ ಮಾರ್ಗದರ್ಶನವನ್ನೂ ಪಡೆದವರು. ನಗರದ ಬೇರೆ ಬೇರೆ ಭಾಗಗಳಲ್ಲಿ ಗ್ಯಾಸ್‌ನಿಂದ ದೀಪಗಳು ಉರಿಯುತ್ತಿವೆ. ಅವು ಹೊರಸೂಸುವ ಬೆಳಕಿನ ಶಕ್ತಿಯಲ್ಲಿ ತಾರತಮ್ಯವಿರಬಹುದು. ಆದರೆ ಬೆಳಕಿನ ಮೂಲ ವಲ್ಲಿರುವ ಗ್ಯಾಸ್ ಮಾತ್ರ ಒಂದೇ ಸ್ರೋತದಿಂದ ಅಥವಾ ಕೇಂದ್ರ ದಿಂದ ಬಂದಿರುತ್ತದೆ. ಇದರಂತೆ ಬೇರೆ ಬೇರೆ ದೇಶಗಳಲ್ಲಿ ಉದಿಸಿದ ಧಾರ್ಮಿಕ ಮುಖಂಡರೂ ಪ್ರವಾದಿಗಳೂ ಆಧ್ಯಾತ್ಮಿಕ ದೀಪಗಳು. ಅವರೆಲ್ಲರಿಗೂ ಸ್ಫೂರ್ತಿಯ ಸರಬರಾಜು ಒಂದೇ ಮೂಲ ಸ್ರೋತನಾದ ಭಗವಂತನಿಂದಲೇ ಆಗಿದೆ. ಎಲ್ಲ ಪ್ರವಾದಿಗಳೂ ಅವತರಣ ಮಾಡಿದ ಮಹಾತ್ಮರೂ ಉಪದೇಶಿಸಿದ ಮುಖ್ಯ ವಿಷಯಗಳಲ್ಲಿ ಸಾಮ್ಯವಿದೆ.